**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.572/2025

| | | |
|---|---|---|
| ಸಾಕ್ಷಿದಾರರ ಹೆಸರು | ಭಾಸ್ಕರ | ಸಿ.ಡಬ್ಲ್ಯು-6 |
| ತಂದೆಯ ಹೆಸರು | ಪುಟ್ಟರಾಜು | ಪಿ .ಡಬ್ಲ್ಯೂ-1 |
| ವಯಸ್ಸು | 48 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಆಟೋ ಚಾಲಕ | ದಿನಾಂಕಃ |
| ವಾಸಃ | ಶಿವಮೊಗ್ಗ | 04.03.2026 |

**ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 299 ರಅಡಿಯಲ್ಲಿ ಸಾಕ್ಷ್ಯಾವಿಚಾರಣೆಃ- ಎಪಿಪಿ ರವರಿಂದಃ**

**1.** ಸುಮಾರು 8 ವರ್ಷಗಳ ಹಿಂದೆ ನಾನು ವಿನೋಬನಗರದಲ್ಲಿ ಆಟೋ ಓಡಿಸುತ್ತಿದ್ದಾಗ ಶಿವಮೊಗ್ಗದ ವಿನೋಬನಗರ ರಸ್ತೆಯಲ್ಲಿ ಪೋಲಿಸರು ನನ್ನನ್ನು ಕರೆದು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡರು. ಅದು ಅಮಾನತ್ತು ಪಂಚನಾಮೆಯ ಧೃಡೀಕೃತ ನಕಲಾಗಿದ್ದು, ಅದನ್ನು ನಿಪಿ-1 ಎಂದು, ಫೋಟೋದ ಧೃಡೀಕೃತ ನಕಲನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**2.** ದಿನಾಂಕ 19.08.2015 ರಂದು ನನ್ನ ಮತ್ತು ಚಾ.ಸಾ 7 ರವರ ಸಮಕ್ಷಮ ಆರೋಪಿತನು ತೋರಿಸಿದ ಸ್ಥಳದಲ್ಲಿ ಚಾ.ಸಾ 1 ರವರ ಮನೆಯಲ್ಲಿ ಕಳುವಾಗಿದ್ದ ನಿಪಿ-1 ರಲ್ಲಿ ಕಾಣಿಸಿದ ಕ್ರಮ ಸಂಖ್ಯೆ 4 ರಿಂದ 7 ರ ವಸ್ತುಗಳನ್ನು ಆರೋಪಿತನಿಂದ ಅವನ ಮನೆಯಲ್ಲಿ ಅಮಾನತ್ತು ಪಡಿಸಿಕೊಂಡು ಸದರಿ ಕಾಲಕ್ಕೆ ನಿಪಿ-1 ರ ಪಂಚನಾಮೆಯನ್ನು ಮಾಡಿ, ನಿಪಿ-2 ರಂತೆ ಫೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.